# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 2824/2020

| | | |
|---|---|---|
| ಸಾಕ್ಷಿದಾರರ ಹೆಸರು | – ವರಲಕ್ಷ್ಮಿ | ಸಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – ರಂಗನಾಥ್ | ಪಿಡಬ್ಲ್ಯೂ-1 |
| ವಯಸ್ಸು | – ಸು. 41 ವರ್ಷ | ಪ್ರ.ವ.ಬೋ<br>ದಿನಾಂಕ:27.10.2021 |
| ಉದ್ಯೋಗ | – ಮನೆ ಕೆಲಸ | |
| ವಾಸ | – ಪಿ.ಡಿ.ಕೋಟೆ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

ನನ್ನ ಗಂಡ ಶಿಕ್ಷಕರು. ಅವರು ಕೃಷ್ಣಾಪುರ ಗ್ರಾಮದಲ್ಲಿ ಕೆಲಸ ಮಾಡುತ್ತಾರೆ. ನಾನು ಮತ್ತು ನನ್ನ ಗಂಡ ಪಿ.ಡಿ.ಕೋಟೆ ಗ್ರಾಮದಲ್ಲಿ ನಮ್ಮ ಸ್ವಂತ ಮನೆಯಲ್ಲಿ ವಾಸವಿರುತ್ತೇವೆ. ಈ ಪ್ರಕರಣವಾಗುವ ಮೊದಲು ನನ್ನ ಗಂಡನಿಗೆ ಅಪಘಾತವಾಗಿತ್ತು. ನಾನು ನನ್ನ ಗಂಡನಿಗೆ ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿಕೊಂಡಿದ್ದೆ. ನಾವು ಬೆಂಗಳೂರಿಗೆ ಹೋಗುವಾಗ ನಮ್ಮ ಮನೆಯಲ್ಲಿ ಯಾರೂ ಇರಲಿಲ್ಲ ಹಾಗಾಗಿ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದೆವು.

2. ಈಗ ಎರಡು ವರ್ಷಗಳ ಹಿಂದೆ ನಮ್ಮ ಮನೆಯ ಪಕ್ಕದವರಾದ ರಂಗನಾಥ್‌ರವರು ನಮಗೆ ಫೋನ್ ಮಾಡಿ ನಮ್ಮ ಮನೆಯಲ್ಲಿ ಕಳ್ಳತನವಾಗಿರುವ ವಿಚಾರವನ್ನು ನಮಗೆ ಬೆಳಿಗ್ಗೆ 06.30 ಗಂಟೆಗೆ ತಿಳಿಸಿದರು. ಕಳ್ಳತನವಾಗಿರುವ ವಿಚಾರ ತಿಳಿದು ಬೆಂಗಳೂರಿನಿಂದ ನಮ್ಮ ಊರಿಗೆ ಬಂದೆನು. ನಾನು ಬಂದು ನೋಡಿದಾಗ ನಮ್ಮ ಮನೆಯ ಬೀಗವನ್ನು ಯಾರೋ ಒಡೆದು ಕಳ್ಳತನ ಮಾಡಿದ್ದರು. ನಾನು ಮನೆಯ ಒಳಗಡೆ ಹೋಗಿ ನೋಡಿದಾಗ ಮನೆಯಲ್ಲಿ ಎಲ್ಲ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಹಾಸಿಗೆಗಳೆಲ್ಲವನ್ನೂ ಕಿತ್ತು ಹಾಕಿದ್ದರು. ನಮ್ಮ ರೂಮಿನಿನಲ್ಲಿ ಇದ್ದ ಬೀರು ಮುರಿದು ಅದರಲ್ಲಿದ್ದ ಒಡವೆಗಳು ಕಳ್ಳತನವಾಗಿರುವುದು ಕಂಡುಬಂದಿತು. ನಾನು ಬೀರುವಿನಲ್ಲಿ ಇಟ್ಟಿದ್ದ 30 ಗ್ರಾಂನ ಚಿನ್ನದ ಕರಿಮಣಿ ಸರ, 50 ಗ್ರಾಂನ ಎರಡು ಬಂಗಾರದ ಬಳೆಗಳು, 20 ಗ್ರಾಂನ ಒಂದು ಬಂಗಾರದ ಚೈನು, 10

ಗ್ರಾಂನ ಒಂದು ಬಂಗಾರದ ಚೈನು ಮತ್ತು ರೇಷ್ಮೆ ಬಟ್ಟೆ ಕಳುವಾಗಿದ್ದವು. ನಮ್ಮ ಮನೆಯ ಪಕ್ಕದವರು ನಮಗೆ ಫೋನ್ ಮಾಡಿದ್ದ ಹಿಂದಿನ ರಾತ್ರಿ ಕಳ್ಳತನವಾಗಿರುವ ವಿಚಾರ ತಿಳಿಯಿತು. ಸಾಕ್ಷಿಗೆ ಒಂದು ದಾಖಲೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರಾಗಿದ್ದು, ಅದನ್ನು **ನಿಪಿ-1** ಎಂದು, ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಮತ್ತೆ ಎರಡು ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅವು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯಾಗಿದ್ದು, ಅವುಗಳನ್ನು **ನಿಪಿ-2 ಮತ್ತು 3** ಎಂದು, ನಿಪಿ-2 ಮತ್ತು 3 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2(ಎ) ಮತ್ತು ನಿಪಿ-3(ಎ)** ಎಂದು ಗುರುತಿಸಲಾಯಿತು. ಪೊಲೀಸ್‌ರು ಪಂಚನಾಮೆ ಜರುಗಿಸಲು ನಮ್ಮ ಮನೆಗೆ ಬಂದಿದ್ದರು. ಪೊಲೀಸ್‌ರಿಗೆ ಕಳುವಾದ ಸ್ಥಳವನ್ನು ನಾನೇ ತೋರಿಸಿದ್ದೇನೆ. ನಿಪಿ-2 ಮತ್ತು 3 ಕ್ಕೆ ನನ್ನ ಜೊತೆ ಚಾಸಾ-2 ಮತ್ತು 3 ರವರು ಸಹಿ ಮಾಡಿರುತ್ತಾರೆ. ಪೊಲೀಸ್‌ರು ಘಟನಾ ಸ್ಥಳವನ್ನು ಪರಿಶೀಲನೆ ಮಾಡಿದರು.

4. ಕಳ್ಳತನವಾದ ಒಂದು ವರ್ಷದ ನಂತರ ಹಿರಿಯೂರು ಪೊಲೀಸ್‌ರು ಠಾಣೆಗೆ ಬರಲು ತಿಳಿಸಿದರು. ನಂತರ ಪೊಲೀಸ್‌ರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ಕಳ್ಳನನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಆರೋಪಿತ ಕಳ್ಳತನ ಮಾಡಿರುವ ನಮ್ಮ ಮನೆಯನ್ನು ಮತ್ತು ಸ್ಥಳವನ್ನು ಪೊಲೀಸ್‌ರ ಸಮಕ್ಷಮ ತೋರಿಸಿದ. ಆರೋಪಿತನನ್ನು ಸದರಿ ದಿನದಂದು ನೋಡಿದೆ. ನಂತರ ಪೊಲೀಸ್‌ರ ಮೂಲಕ ಠಾಣೆಯಲ್ಲಿ ಆತನ ಹೆಸರು ಮತ್ತು ವಿಳಾಸ ಗೊತ್ತಾಯಿತು. ನನಗೆ ಹಿರಿಯೂರು ಪೊಲೀಸ್ ಠಾಣೆಯಲ್ಲಿ ಕರಿಮಣಿ ಸರ, ಎರಡು ಬಂಗಾರದ ಬಳೆಗಳು, ಒಂದು ಬಂಗಾರದ ಚೈನನ್ನು ತೋರಿಸಿದರು. ಆಗ ಸದರಿ ಬಂಗಾರದ ಸರ, ಚೈನು ಮತ್ತು ಬಳೆಗಳು ನಮ್ಮವು ಎಂದು ತಿಳಿಸಿದೆ. ಸದರಿ ಬಂಗಾರದ ಆಭರಣಗಳನ್ನು ನನ್ನ ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇನೆ.

**ಈ ಹಂತದಲ್ಲಿ ಸರ್ಕಾರಿ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.